ಆ) ಇದರಲ್ಲಿ 6 ಎಕರೆ ಜಮೀನು ಸರ್ಕಾರದ ಸ್ವಾಧೀನದಲ್ಲಿದ್ದು, ಇನ್ನುಳಿದ 22 ಗುಂಟೆ ಜಮೀನನ್ನು ಖಾಸಗಿಯವರು ಅತಿಕ್ರಮಿಸಿರುತ್ತಾರೆ.

ಇ) ಅತಿಕ್ರಮಣದಾರರು ಅಫಜಲಪೂರ ನ್ಯಾಯಾಲಯದಲ್ಲಿ ವ್ಯಾಜ್ಯ ಹೂಡಿರುವುದರಿಂದ, ಒತ್ತುವರಿಯಾಗಿರುವ ಜಮೀನು ತೆರವುಗೊಳಿಸುವ ಪ್ರಕರಣ ನ್ಯಾಯಾಲಯದಲ್ಲಿದೆ.

784 (1003) ಶ್ರೀ ಪಾಟೀಲ್ ಎಂ.ವೈ. (ಅಫ್ಜಲಪುರ): ಮಾನ್ಯ ಉಪ ಮುಖ್ಯ ಮಂತ್ರಿಗಳು ಹಾಗೂ ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಅಫಜಲಪೂರ ಮತಕ್ಷೇತ್ರದಲ್ಲಿ ಕೆರೆಗಳ ಸಂಖ್ಯೆಗಳೆಷ್ಟು ಹಾಗೂ ಆ ಕೆರೆಗಳ ಮುಖಾಂತರ ಎಷ್ಟು ಎಕರೆ ಪ್ರದೇಶಗಳಿಗೆ ನೀರಾವರಿ ಸೌಲಭ್ಯ ಒದಗಿಸಲಾಗುತ್ತಿದೆ ;

ಆ) ಆ ಕ್ಷೇತ್ರದ ಕೆರೆಗಳು ತುಂಬದೇ ಇದ್ದ ಪಕ್ಷದಲ್ಲಿ ಹತ್ತಿರದಲ್ಲಿ ಹರಿಯುತ್ತಿರುವ ಭೀಮಾ ನದಿಯಿಂದ ಈ ಕೆರೆಗಳಿಗೆ ನೀರು ತುಂಬಿಸುವ ಕೆಲಸವನ್ನು ಸರ್ಕಾರ ಕೈಗೆತ್ತಿಕೊಳ್ಳುವುದೇ ?

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯ ಮಂತ್ರಿಗಳು ಹಾಗೂ ಸಣ್ಣ ನೀರಾವರಿ ಸಚಿವರು):

ಅ) ಅಫಜಲಪೂರ ಮತಕ್ಷೇತ್ರದಲ್ಲಿ ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಡಿ 8 ಕೆರೆಗಳು ಅಸ್ತಿತ್ವದಲ್ಲಿರುತ್ತವೆ. 2000–2001ನೇ ಸಾಲಿನಲ್ಲಿ ಈ ಕೆರೆಗಳಿಂದ 254.30 ಹೆಕ್ಟೇರ್ ಜಮೀನಿಗೆ ನೀರಾವರಿ ಸೌಲಭ್ಯ ಕಲ್ಪಿಸಿದ್ದು, ನಂತರದ ವರ್ಷಗಳಲ್ಲಿ ಮಳೆ ಬಾರದೆ ಈ ಕೆರೆಗಳು ತುಂಬದೇ ಇದ್ದ ಕಾರಣ, ಯಾವುದೇ ನೀರಾವರಿ ಸೌಲಭ್ಯ ಕಲ್ಪಿಸಲು ಸಾಧ್ಯವಾಗಿಲ್ಲ.

ಆ) ತಾಂತ್ರಿಕ ಶಕ್ಯತೆ ಹಾಗೂ ಅನುದಾನದ ಲಭ್ಯತೆಯ ಆಧಾರದ ಮೇಲೆ ಪರಿಶೀಲಿಸಲಾಗುವುದು.

785 (349) ಶ್ರೀ ಎಸ್.ಎಸ್. ಪಾಟೀಲ್ (ಮುಂಡರಗಿ): ಮಾನ್ಯ ಉಪ ಮುಖ್ಯ ಮಂತ್ರಿಗಳು ಹಾಗೂ ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮುಂಡರಗಿ ತಾಲೂಕು ಡಂಬಳ ನೀರಾವರಿ ಕೆರೆಯ ನೂತನ ಬಲದಂಡೆ ಕಾಲುವೆಯ ಕೆಲಸ ಪ್ರಾರಂಭವಾದ ದಿನಾಂಕ ತಿಳಿಸುವುದು ;

ಆ) ಪ್ರಾರಂಭದಲ್ಲಿ ಈ ಕಾಲುವೆಯ ಅಂದಾಜು ಮೊತ್ತ ಎಷ್ಟಿತ್ತು ; ಇಲ್ಲಿಯವರೆಗೆ ಖರ್ಚಾದ ಹಣವೆಷ್ಟು ;

ಇ) ಈ ಕಾಲುವೆಯ ಕಾಮಗಾರಿ ಮುಗಿದು ರೈತರಿಗೆ ನೀರಾವರಿ ಮಾಡಲು ಎಷ್ಟು ವರ್ಷ ಬೇಕಾಗುತ್ತದೆ ?